ನುಂಗಲು ಸಾಧ್ಯವಿಲ್ಲ; ಅವರಿಗೆ ಕಾಲವೇ ದಾರಿಕೊಡುತ್ತದೆ, ಅಂದರೆ ಸಹಕಾರಿಯಾಗುತ್ತದೆ. ಹೀಗೆ ಆತ್ಮಸಾಕ್ಷಾತ್ಕಾರ ಹೊಂದಿದವರಿಗೆ ಕಾಲವು 'ಸಾವು' ಎಂಬ ರೂಪದಲ್ಲಿ ಕಾಡದೆ, ಮುಕ್ತಿಯ ಮಾರ್ಗದೆಡೆಗೆ ಕೊಂಡೊಯ್ಯುತ್ತದೆ.

**ಕಂಸವಧೆ:** ನಂತರ ಕೃಷ್ಣನು ಕಂಸನನ್ನು ವಧೆ ಮಾಡಿದ ಎಂದು ಭಾಗವತ ಪುರಾಣ ಹೇಳುತ್ತದೆ. ಕಂಸನೆಂದರೆ ಯಾರು? ಅರಿಷಡ್ವರ್ಗಗಳ ಅಧೀನಕ್ಕೆ ಒಳಗಾಗಿ, ಪರಮಾತ್ಮನನ್ನು ಮರೆತು, ಅಷ್ಟವಿಧವಾದ ಮದಗಳಿಗೆ ವಶನಾಗಿ, ಅಹಂಕಾರದಿಂದ ಮೆರೆಯುತ್ತ, ಸಮಾಜಕ್ಕೆ ಯಾವನು ಕಂಟಕನಾಗುತ್ತಾನೋ ಅವನೇ ಕಂಸ. ಅಂಥ ಮನಃಸ್ಥಿತಿಯುಳ್ಳವನನ್ನು ಜ್ಞಾನರೂಪಿಯಾದ ಶ್ರೀಕೃಷ್ಣನು ಸಂಹರಿಸಿದನು. ಇದೇ ಕಂಸವಧೆಯ ಅಂತರಾರ್ಥ.

**ಕಷ್ಟಕೋಟಲೆಗಳನ್ನು ಹೊತ್ತುಕೊಂಡವನು :** ಶ್ರೀಕೃಷ್ಣನ ಜನನದ ಸಂದರ್ಭದಲ್ಲಿ ಸಂಭವಿಸಿದ ಘಟನೆಗಳು, ಶಿಶುವಾಗಿದ್ದಾಗಿನಿಂದ ಆತನ ಮೇಲೆ ಬಂದೆರಗಿದ ವಿಪತ್ತುಗಳು – ಇವುಗಳನ್ನು ಸಹ ನಾವು ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ. ಶ್ರೀಕೃಷ್ಣನ ಜನನದ ಸಮಯದಲ್ಲಿ ತಾಯಿ ದೇವಕಿಯು ಪ್ರಸವವೇದನೆಯನ್ನು ತಾಳದೆ, ಗಟ್ಟಿಯಾಗಿ ಕಿರುಚಿಕೊಳ್ಳಬೇಕೆಂದರೂ ಸಾಧ್ಯವಾಗದಷ್ಟು ಹೆದರಿ ನಡುಗುತ್ತಿದ್ದಳು. ತಾನು ಕಿರುಚಿಕೊಂಡರೆ ಆ ಶಬ್ದವನ್ನು ಕೇಳಿದ ಸೆರೆಮನೆಯ ಕಾವಲುಭಟರು ರಾಜನಾದ ಕಂಸನಿಗೆ ಹೇಳಿದರೆ, ಅವನು ಬಂದು ಮಗುವನ್ನು ಕೊಲ್ಲಬಹುದೆಂಬ ಭಯ ಆಕೆಯನ್ನು ಕಾಡುತ್ತಿತ್ತು. ಅದಲ್ಲದೆ, ಪತಿಯಾದ ವಸುದೇವನೂ ಬಲವಾದ ಸಂಕೋಲೆಗಳಿಂದ ಬಂಧಿತನಾಗಿದ್ದನು. ಅವನು ತನ್ನ ಪ್ರೀತಿಯ ಮಡದಿಯ ಪ್ರಸವದ ಸಮಯದಲ್ಲಿ ಸೂಲಗಿತ್ತಿಯರನ್ನು ಇಟ್ಟುಕೊಳ್ಳುವ ಸ್ಥಿತಿಯಲ್ಲೂ ಇರಲಿಲ್ಲ. ಸಾಂತ್ವನದ ಮಾತುಗಳನ್ನು ಆಡುವುದನ್ನು ಬಿಟ್ಟು, ಏನನ್ನೂ ಮಾಡಲಾಗದ ಅಸಹಾಯಕ ಪರಿಸ್ಥಿತಿಯಲ್ಲಿ ಅವನು ಇದ್ದನು.

ಈಗಿನ ಕಾಲದಲ್ಲಿ ಎಷ್ಟೇ ದಟ್ಟದರಿದ್ರನಾದರೂ, ಅವನ ಪತ್ನಿಯ ಹೆರಿಗೆಯ ಸಂದರ್ಭದಲ್ಲಿ ನೆರೆಹೊರೆಯವರಾದರೂ ಬಂದು ಸಹಾಯ ಮಾಡುತ್ತಾರೆ. ಅಥವಾ ಸರಕಾರಿ ಆಸ್ಪತ್ರೆಯ ಸೌಲಭ್ಯವಾದರೂ ದೊರೆಯುತ್ತದೆ. ಅಲ್ಲಿ ದಾದಿಗಳು, ವೈದ್ಯರು ದಂಪತಿಗಳ ಸಂಕಷ್ಟದ ಸಮಯಕ್ಕೆ ಒದಗುತ್ತಾರೆ. ಜಗದ್ರಕ್ಷಕನಾದ ಶ್ರೀಮಹಾವಿಷ್ಣುವು ಕೃಷ್ಣನಾಗಿ ಜನಿಸುವ ಸಂದರ್ಭದಲ್ಲಿ, ಚಕ್ರವರ್ತಿಯ ಮಗಳಾದ ದೇವಕಿಗೆ ಇಂತಹ ಕನಿಷ್ಠ ಸೌಲಭ್ಯಗಳು ಕೂಡ ಸಿಕ್ಕಲಿಲ್ಲ ಎನ್ನುವುದು ದುಃಖ ತರುವ ವಿಷಯ.

ಇವನ್ನೆಲ್ಲ ಗಮನಿಸಿದರೆ, ಲೋಕಪಾಲಕನಾದ ಶ್ರೀಮನ್ನಾರಾಯಣನು ತಾನು ಕೃಷ್ಣನಾಗಿ ಜನಿಸುವ ಸಂದರ್ಭದಲ್ಲಿ ತನ್ನ ತಂದೆತಾಯಿಗಳಾಗಲಿ, ಸ್ವತಃ ತಾನೇ ಆಗಲಿ, ಅನುಭವಿಸಿದಷ್ಟು ತೊಂದರೆಗಳನ್ನು ಮಾನವರಾದ ನಮಗೆ ಉಂಟಾಗಲು ಬಿಡುವುದಿಲ್ಲ ಎನ್ನುವುದು ಸ್ಪಷ್ಟವಾಗುವುದು. ಏಕೆಂದರೆ ಏನೇ ಕಷ್ಟಗಳು ಬರಲಿ, ವಿಪತ್ತುಗಳು ಬರಲಿ ಅವುಗಳನ್ನೆಲ್ಲಾ ಭಗವಂತನು ತಾನೇ ಹೊತ್ತಿಕೊಳ್ಳುತ್ತಾನೆ. ನಮಗೆ ರಕ್ಷಣೆಯನ್ನು ಅವನು ಯಾವಾಗಲೂ ಒದಗಿಸುತ್ತಾನೆ. ಏಕೆಂದರೆ ನಾವು ಆತನ ಮಕ್ಕಳು. ನಾವು ಎಷ್ಟೇ ಕ್ರೂರಿಗಳಾಗಿದ್ದರೂ, ಪಾಪಿಗಳಾಗಿದ್ದರೂ, ತಪ್ಪುಗಳನ್ನು ಮಾಡುತ್ತಿದ್ದಾಗಲೂ, ತಾಯಿಯು ತನ್ನ ಮಕ್ಕಳ ತಪ್ಪನ್ನು ಯಾವತ್ತೂ ಕ್ಷಮಿಸುವಂತೆ, ಭಗವಂತನು ನಮಗೆ ಸುಖವನ್ನೇ ನೀಡುತ್ತಾನೆ.

**ಉಪಸಂಹಾರ :** ಭಗವದ್ಗೀತೆಯಲ್ಲಿ ಕೃಷ್ಣನು, **'ಸಂಭವಾಮಿ ಯುಗೇ ಯುಗೇ'** (ಯುಗಯುಗಗಳಲ್ಲಿಯೂ ನಾನು ಹುಟ್ಟಿ ಬರುತ್ತೇನೆ) ಎಂದು ಹೇಳಿದ್ದಾನೆ. ಮುಂದೊಂದು ದಿನ ಅವನು ಮತ್ತೊಮ್ಮೆ ಹುಟ್ಟಿಬರಲಿ. ಅವನ ಮೂಲಕ ಸಮಾಜದಲ್ಲಿರುವ ನರರೂಪಿ ರಾಕ್ಷಸರು ನಾಶವಾಗಿ, ಸಕಲರೂ ಸದ್ಭಾವನೆಯಿಂದ, ಸಾಮರಸ್ಯದಿಂದ ಬಾಳುವಂತಾಗಲಿ. ಶ್ರೀಮಹಾವಿಷ್ಣುವೇ ಪರಿಪೂರ್ಣ ಅವತಾರವಾಗಿ ಶ್ರೀಕೃಷ್ಣ ರೂಪದಲ್ಲಿ ಜನಿಸಿದ್ದಾನೆ; ಭಗವದ್ಗೀತೆಯಲ್ಲಿ ವಾಗ್ದಾನ ಮಾಡಿದಂತೆ ದುಷ್ಟಶಿಕ್ಷಕನಾಗಿ ಶಿಷ್ಟರಕ್ಷಕನಾಗಿ ತನ್ನ ಲೀಲೆಗಳನ್ನು ತೋರಿಸುತ್ತ, ಧರ್ಮಸ್ಥಾಪನೆಯನ್ನು ಮಾಡಿದ್ದಾನೆ. ಅಂಥ ಶ್ರೀಕೃಷ್ಣನು ನಮ್ಮನ್ನೆಲ್ಲಾ ರಕ್ಷಿಸಲಿ. ಅವನನ್ನು ಸರಿಯಾಗಿ ಅರ್ಥ ಮಾಡಿಕೊಂಡು ಆರಾಧಿಸೋಣ, ಆ ಮೂಲಕ ಪಾವನರಾಗೋಣ.

## ತರುಣಯತಿ ಗುರು

ಶ್ರೀವಿವೇಕಾನಂದ, ವಿಶ್ವಮಾನವತೆಗೆ ತಂದ ಅನುಬಂಧ
ವಿಚಾರಮತಿಗೆ, ಗತಿಗೆ ಚಲನೆ ನೀಡುತ್ತ ಬಂದ
ಹೃದಯ ಕಡಲುಕ್ಕಿ ನಲಿದಂತೆ ಬಂದ, ಬಂದ
ಪಾಚಿಗಟ್ಟಿದ ಕರ್ಮಕತ್ತಲೆಗೆ ಬೆಳಗು ತಂದ
ವಿಜ್ಞಾನ ಮತಿ ಮಥಿಸಿ ಜಿಜ್ಞಾಸೆ ಮೆರೆಸಿ
ರಾಮಕೃಷ್ಣರ ಬಳಿಬಂದ
ವಿದ್ಯೆಗಿರಿಯಾಗಿ ಬೆಳೆದ, ಬೆಳೆದ
ಆತ್ಮಸಿರಿಯಾಗಿ ಹೊಳೆದ.
ಜಗ ಬೆರಗಾಗುವಂತೆ ಮಾತನಾಡಿದ
ವಾಗ್ಮಿ ಸಂನ್ಯಾಸಿ ವೀರ
ಜ್ಞಾನಕಡಲಿಗೆ ಧುಮುಕಿ ಅಲೆ ಎಬ್ಬಿಸಿದ ಗುರುವರ

ರಾಮಕೃಷ್ಣರ ತಪೋವಿದ್ಯೆಯನು ಪರಕಿಸಿದ ಕಟ್ಟಾಳು
ನೇರ ಗುರಿಯಾಳು ಹುರಿಯಾಳು ಉಕ್ಕಿನ ನರದಾಳು
ವಿಶ್ವಭಾರತಿಗೆ ಆರತಿಯ ಬೆಳಗಿದಾತ, ಖ್ಯಾತ
ಲೋಕ ಸೇವೆಗೆ ಕರುಣೆ ಬೆಳಗಿ ನಿಂತ ಸಂತ, ಮಹಂತ
ತ್ಯಾಗ ಕಿರಣದ ತರುಣಯತಿಗುರು
ನವಯುಗಾಚಾರ್ಯ
ಜಗ ಬೆಳಗುವಾ ಯೋಗವಿದ್ಯಾಸೂರ್ಯ
ಯೋಗಿವರ್ಯ

**– ಎಂ.ಜಿ. ಗಂಗನಪಳ್ಳಿ, ಬೀದರ್**